ರವಾನೆ ಸಂಖ್ಯೆ: 359:2019.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಕೊಡಗು, ಮಡಿಕೇರಿ
ದಿನಾಂಕ: 29ನೇ ಜನವರಿ 2019.

# ಸೂಚನಾ ಪತ್ರ

ವಿಷಯ: ಬೆರಳಚ್ಚುಗಾರರ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಸಂದರ್ಶನಕ್ಕೆ (Viva Voce) ಹಾಜರಾಗುವ ಕುರಿತು.

ಉಲ್ಲೇಖ:1. ಜಿಲ್ಲಾ ನ್ಯಾಯಾಲಯದ ಅಧಿಸೂಚನೆ ಸಂಖ್ಯೆ: 2/2017 ದಿನಾಂಕ: 31.05.2017.

2. ಈ ಕಛೇರಿ ಟಿಪ್ಪಣಿ ಆದೇಶ ದಿ: 29.01.2019.

- - -

ಉಲ್ಲೇಖ-1 ರಲ್ಲಿ ಬೆರಳಚ್ಚುಗಾರರ ಹುದ್ದೆಗಳ ನೇಮಕಾತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸಿದ್ದು, ಸದರಿ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಸಂದರ್ಶನವನ್ನು ದಿನಾಂಕ: 15.02.2019 ರಂದು ಸಂಜೆ 4.00 ಗಂಟೆಗೆ ನಿಗದಿಪಡಿಸಲಾಗಿರುತ್ತದೆ. ಅದುದರಿಂದ ಸಂದರ್ಶನಕ್ಕೆ ಅರ್ಹರಾಗಿರುವ ಎಲ್ಲಾ ಅಭ್ಯರ್ಥಿಗಳು ಸದರಿ ದಿನಾಂಕದಂದು ಅಪರಾಹ್ನ 12.00 ಗಂಟೆಗೆ ಅರ್ಜಿಯಲ್ಲಿ ನಮೂದಿಸಿದ ಕೆಳಕಂಡ ದಾಖಲಾತಿಗಳ ಮೂಲ ದಾಖಲೆಗಳೊಂದಿಗೆ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ ಇವರ ಕಛೇರಿಗೆ ಹಾಜರಾಗಬೇಕೆಂದು ಈ ಮೂಲಕ ತಿಳಿಯಪಡಿಸಿದೆ. ಕೆಳಕಂಡ ದಾಖಲೆಗಳನ್ನು ಪರಿಶೀಲನೆಯ ವೇಳೆ ಹಾಜರುಪಡಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಪರಿಗಣಿಸಲಾಗುವುದಿಲ್ಲ ಮತ್ತು ಅವರ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗುವುದು. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಅವರವರ ಖರ್ಚು ವೆಚ್ಚಗಳನ್ನು ಅವರವರೇ ಭರಿಸತಕ್ಕದ್ದು.

ಸಂದರ್ಶನಕ್ಕೆ ಅರ್ಹರಾಗಿರುವ ಅಭ್ಯರ್ಥಿಗಳ ವಿವರವನ್ನು ಈ ಕಛೇರಿಯ ಅಧಿಕೃತ ಜಾಲತಾಣ https://districts.ecourts.gov.in/india/karnataka/kodagu/recruit ರಲ್ಲಿ ರಲ್ಲಿ ಪ್ರಕಟಿಸಲಾಗಿರುತ್ತದೆ.

1. ಆನ್‌ಲೈನ್ ಅರ್ಜಿಯ ಪ್ರತಿ.

2. ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ.

3. ಹಿರಿಯ ಕನ್ನಡ ಮತ್ತು ಆಂಗ್ಲ ಬೆರಳಚ್ಚು ಪರೀಕ್ಷೆಯ ಅಂಕಪಟ್ಟಿಗಳು.

4. ಜಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

5. ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

6. ನಡತೆ ಪ್ರಮಾಣ ಪತ್ರಗಳು–3 ( ಗಣ್ಯವ್ಯಕ್ತಿಗಳಿಂದ–2 ಹಾಗೂ ಕೊನೆಯಲ್ಲಿ ವ್ಯಾಸಂಗ ಮಾಡಿದ ಶಾಲೆ/ಕಾಲೇಜಿನಿಂದ ಪಡೆದ ಪ್ರಮಾಣ ಪತ್ರ).

7. ಅಭ್ಯರ್ಥಿಯ ಇತ್ತೀಚಿನ ಭಾವಚಿತ್ರ -3

8. ಆಧಾರ್‌ಕಾರ್ಡ್/ಗುರುತಿನ ಚೀಟಿಯ ಪ್ರತಿ.

9. ಇನ್ನಿತರೆ ಪ್ರಮಾಣ ಪತ್ರಗಳು (ಮೀಸಲಾತಿ ಕೋರಿದ್ದಲ್ಲಿ)

/ಆದೇಶದ ಮೇರೆಗೆ/

ಪ್ರಭಾರ ಮುಖ್ಯ ಆಡಳಿತಾಧಿಕಾರಿಗಳು,
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಕೊಡಗು-ಮಡಿಕೇರಿ.